ಸೀನಿಯರ್ ಮ್ಯಾನೇಜರ್ ಆಗಿದ್ದೇನೆ. ಹಿರಿಯರು ಇಲ್ಲ ಅನ್ನುವುದನ್ನು ಬಿಟ್ಟರೆ ಮತ್ತೆಲ್ಲವೂ ಚೆನ್ನಾಗಿದೆ.

ಇವತ್ತೇ ನಿನ್ನನ್ನು ನೆನಪಿಸಿಕೊಂಡು ಈ ಇ–ಮೇಲನ್ನು ಬರೆಯುತ್ತಿರಲು ಕಾರಣವೆಂದರೆ, ನೀನು ಯಾವಾಗಲೂ ಹೇಳುತ್ತಿದ್ದಂತೆ ನಾನು ಈಗ ಯಾವ ಮರಕ್ಕೂ ಅಂಟಿಕೊಂಡು ಬೆಳೆಯುತ್ತಿರುವ ಬಂದಳಿಕೆಯಲ್ಲ. ನನ್ನ ಬದುಕು ನನ್ನ ಇಷ್ಟದಂತೆ! ನೀನಿಲ್ಲದ ಬದುಕು ಅದನ್ನು ದಯಪಾಲಿಸಿದೆ ನನಗೆ. ಅಷ್ಟರಮಟ್ಟಿಗೆ ನಾನು ನಿನಗೆ ಮತ್ತೆ ಋಣಿ! ಮತ್ತೂ ಒಂದು ವಿಚಾರವನ್ನು ನಿನ್ನ ಜೊತೆ ಹಂಚಿಕೊಳ್ಳದೇ ಇರಲಾರೆ:

ನಿನ್ನ ಸಾಂಗತ್ಯದ ಸುಖ ನನ್ನನ್ನು ಎಷ್ಟು ತುಂಬಿಕೊಂಡುಬಿಟ್ಟಿತ್ತು ಎಂದರೆ, ವರ್ಷಾನುಗಟ್ಟಲೆ ಯಾವ ಪುರುಷನಿಗೂ ನನ್ನೊಳಗೆ ಪ್ರವೇಶವೇ ಇರಲಿಲ್ಲ. ಆದರೆ, ಇತ್ತೀಚೆಗೆ ನನ್ನ ಕಂಪನಿಯ ಹುಡುಗನೊಬ್ಬ ನನ್ನನ್ನು ತುಂಬಾ ಹಚ್ಚಿಕೊಂಡುಬಿಟ್ಟಿದ್ದಾನೆ! ನಾನೂ ಅಷ್ಟೆ – ಬಿಟ್ಟೆನೆಂದರೆ ಬಿಡಲಾರದಷ್ಟು! ಅವನು ಅರಳು ಹುರಿದಂತೆ ಕಾವ್ಯಮಯವಾಗಿ ಬಂಗಾಳಿ ಅಕ್ಸೆಂಟಿನಲ್ಲಿ ಮಾತನಾಡುವ ಇಂಗ್ಲಿಷ್ ಇರಲಿ, ಒಮ್ಮೆ ಹೇಳಿದರೆ ಸಾಕು ಎಲ್ಲವನ್ನೂ ಅರ್ಥಮಾಡಿಕೊಂಡು ಪಟಪಟನೆ ಕೆಲಸ ಮಾಡಿ ಮುಗಿಸುವ ಜಾಣ್ಮೆಯಿರಲಿ, ಸಂಗೀತ–ಸಾಹಿತ್ಯ–ಸಿನಿಮಾ ಯಾವುದೆಂದರೆ ಅದರಲ್ಲಿ ತಿಳಿವಳಿಕೆ ಇರಲಿ – ಸಾಟಿಯಿಲ್ಲ ಅವನಿಗೆ! ಅಂಥವನೊಬ್ಬನನ್ನು ನಾನು ಎಂದೂ ನೋಡಿಯೇ ಇರಲಿಲ್ಲ! ಒಮ್ಮೊಮ್ಮೆ ನನಗೆ ಅನ್ನಿಸುವುದುಂಟು – ನನಗೆಲ್ಲಿ ಗಂಟುಬಿದ್ದನಪ್ಪಾ ಇವನು ಎಂದು! ಅವನು ಎಂಥಾ ಹದಿ–ಹುರುಪಿನ ಹುಡುಗನೆಂದರೆ, ಅವನನ್ನು ಒಮ್ಮೆಯೂ ಮನೆಗೆ ಕರೆದುಕೊಂಡು ಬಂದಿಲ್ಲ – ನನ್ನ ಮಗಳ ಕಣ್ಣಿಗೆ ಬಿದ್ದುಬಿಟ್ಟಾನು ಎಂಬ ಭಯ ನನಗೆ!

ಈ ಹೊಸ ಸಂಬಂಧದಲ್ಲಿ ನನಗೆ ಒಂದೇ ಒಂದು ಸೋಜಿಗದ ಸಂಗತಿ ಎಂದರೆ, ಅವನು ಯಾವುದರಲ್ಲೂ ಒಂದು ಅಣುವಿನಷ್ಟೂ ನಿನ್ನನ್ನು ಹೋಲುವುದಿಲ್ಲ! ನೀನೇ ಅವನಿಗೆ ಎಲ್ಲವನ್ನೂ ಹೇಳಿ, ವಿಭಿನ್ನತೆಯ ತರಬೇತಿ ಕೊಟ್ಟು, ನನಗಾಗಿ ಕಳಿಸಿಕೊಟ್ಟಂತೆ! ನಾವಿಬ್ಬರೂ ಸಾಕಷ್ಟು ಬಾರಿ ಏಕಾಂತದಲ್ಲಿ ದಿನಗಟ್ಟಲೆ ಮಧುರಾತಿಮಧುರ ಕ್ಷಣಗಳನ್ನು ಕಳೆದಿದ್ದೇವೆ! ಆದರೆ, ಯಾವತ್ತೂ ನಾವಿಬ್ಬರು, ಮಲ್ಲೇಶ್ವರದ ಗುಡಿಯ ಬಳಿಯಾಗಲೀ, ಊರಾಚೆಯ ದೊಡ್ಡ ಆಲದ ಮರದ ಹತ್ತಿರವಾಗಲೀ ಎಂದೂ ಹೋದವರಲ್ಲ!

ಪ್ರಾಯಶಃ ಮುಂದೂ ಅತ್ತ ಸುಳಿಯುವವರೂ ಅಲ್ಲ! ಪುರ್ವಿ, ಇದೂ ನಿನ್ನ ಹುನ್ನಾರವೇ!?

ಮತ್ತೊಮ್ಮೆ ಬರೆಯುವೆ.

ನಿನ್ನ ಅನುಗಾಲದ, ಅನು

## ಅಲಕ ತೀರ್ಥಹಳ್ಳಿ

‘ಅಲಕ ತೀರ್ಥಹಳ್ಳಿ’ ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುವ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪದ ಹೂಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. ‘ಈ ಕಥೆಗಳ ಸಹವಾಸವೇ ಸಾಕು’ ಮತ್ತು ‘ನವಿಲೆಸರ’ ಅವರ ಕಥಾಸಂಗ್ರಹಗಳು. ಅವರ ಕಾದಂಬರಿ ‘ಮುಂದೆ ಬರುವುದು ಮಹಾನವಮಿ’. ನಾಟಕಗಳನ್ನು, ಕವಿತೆಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.